ಅವ್ವನ ಹೆಣದ ಪಳೆಯುಳಿಕೆಗಳನ್ನು ಚೀಲದಲ್ಲಿ ತುಂಬಿಕೊಂಡು ಬಂದು ತೆಗೆದಿರಿಸಿದ್ದ ಗುಂಡಿಯೊಳಕ್ಕೆ ಸುರಿದು ಪುನರ್ ಸಂಸ್ಕಾರ ಮಾಡುವುದೆಂತಲೂ, ಅಲ್ಲಿಯೇ ಗೋರಿಯನ್ನೂ ಕಟ್ಟಿಸುವುದೆಂತಲೂ ಪ್ಲ್ಯಾನ್ ಮಾಡಿದ್ದ.

★ ★ ★

ಅಂತೂ ಹೊರಟ ಎರಡು ದಿನದೊಳಗೆ ಬೆಂಗಳೂರಿಗೆ ಬಂದು ಅಲ್ಲಿಂದ ಒಂದು ಟ್ಯಾಕ್ಸಿ ಹಿಡಿದು ಹಳ್ಳಿಗೆ ಬಂದು ತಲುಪುವ ವೇಳೆಗೆ ಸಾಯಂಕಾಲ ಐದು ಗಂಟೆಯಾಗಿಹೋಗಿತ್ತು. ಊರ ಮುಂದಿನ ಅರಳೀಮರದಡಿ ನಿಲ್ಲಿಸಿದ ಕಾರಿನಿಂದ ಲಗ್ಗೇಜು ಇಳಿಸುವ ವೇಳೆಗೆ ತನ್ನನ್ನೇ ಕಾಯುತ್ತಿದ್ದ ಅವನದೇ ಪ್ರಾಯದ ಏಳೆಂಟು ಜನ ಗೆಣೆಕಾರರು ಓಡಿಬಂದು ಅವರವಸರವಾಗಿ ಅವನನ್ನಷ್ಟೇ ಬೇಗ ಬೇಗ ಎಳೆದೊಯ್ಯಲು ಪ್ರಯತ್ನಿಸಿದರು. ದಾಪುಗಾಲು ಹಾಕುತ್ತ ಏಕಕಾಲಕ್ಕೆ ಮೂರು ಜನರಷ್ಟೇ ತೆರಳಬಹುದಾದಷ್ಟು ವಿಶಾಲವಾಗಿದ್ದ ಓಣಿಯಲ್ಲಿನ ಕೊರಕಲು, ಕೆಸರ ಗುಂಡಿಗಳನ್ನು ಹಾರುತ್ತ ನಡೆಯುತ್ತಿರುವಾಗ ಅಲ್ಲಿಗೇ ಬಡಿದ ವಾಸನೆಗೆ ಮೂಗು ಮುಚ್ಚಿಕೊಂಡು 'ಎಂಥದಿದು ಗಬ್ಬು ವಾಸನೆ?' ಎಂದ.

ಅವನ ಗೆಳೆಯರು ನಿಂತರು. ಅವನೂ ನಿಂತ. ಅದುವರೆಗೂ ಇಂಥದೊಂದು ವಾಸನೆ ತಮ್ಮ ಊರಿನಲ್ಲಿ ಬರುತ್ತಿದೆಯೆಂಬುದನ್ನೇ ಗಮನಿಸದಿದ್ದ ಊರ ಜನ ಮೂಗನ್ನು ಅಗಲಿಸಿ, ಉಸಿರನ್ನು ಎಳೆದೂ ಬಿಟ್ಟು ಮಾಡಿ, 'ಹೌದು, ವಾಸನೆ ಬರುತ್ತಿದೆ' ಎಂದರು. ಆದರೆ ಅದು ಅವ್ವನ ಹೆಣದ್ದೇ ವಾಸನೆ ಎಂದು ಹೇಳಲು ನಾಲಿಗೆ ಬರಲೇಯಿಲ್ಲ. ಆದರೂ ಮೂರು ದಿನದಿಂದ ಊರ ಜನರೆಲ್ಲ ಸೇರಿ ತಾವು ಕಲಿತಿದ್ದ ಬ್ರಹ್ಮಾತಿಬ್ರಹ್ಮ ವಿದ್ಯೆಗಳನ್ನೆಲ್ಲ ಪ್ರಯೋಗಿಸಿ ಸಂರಕ್ಷಿಸಿದ್ದ ಅವ್ವನ ಹೆಣದ ವರ್ಣನೆಯನ್ನು ಸಾದ್ಯಂತ ವಿವರಿಸಿದರು. ಕಡ್ಡಿಯಂತಿದ್ದ ಆಕೆಯ ದೇಹ ಇಷ್ಟು ದಪ್ಪ ಊದಿದ್ದು, ಇನ್ನೇನು ಈಗಲೋ ಆಗಲೋ ಕೆಕ್ಕರಿಕೆ ಹಣ್ಣಿನಂತೆ ಬಿರಿದುಬಿಡಬಹುದು ಎಂದರು.

ಅವ್ವನನ್ನು ನೋಡುವ ಕಾತರಕ್ಕಿಂತ, ಉದ್ವೇಗಕ್ಕೆ ಒಳಗಾದ ನಿರಂಜನನ ಕಾಲುಗಳು ಎತ್ತಿಡಲಾಗದಷ್ಟು ಭಾರವಾದವು. ಅಲ್ಲೇ ಕುಸಿದು ಕುಕ್ಕರಿಸಿದ. ಗೆಳೆಯರು ಆತುಕೊಂಡು ನೆಲಕ್ಕೆ ಬೀಳದಂತೆ ತಡೆದು ನಿಲ್ಲಿಸಿದರು.

'ಅವ್ವನ ನೆನಪು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದೆ. ಅಷ್ಟು ಸಾಕು. ಅವ್ವನ ವಿಕಾರವಾಗಿರಬಹುದಾದ ಹೆಣವನ್ನು ನೋಡಿ ನನ್ನ ಮನಸ್ಸಿನಾಳದ ಅವ್ವನಿಗೆ ಅವಮಾನ ಮಾಡಲಾರೆ... ನೀವೇ ಮಣ್ಣು ಮಾಡಿಬಿಡಿ...' ಎಂದು ತನ್ನ ಅಂತಿಮ ನಿರ್ಧಾರವನ್ನು ಹೇಳಿ, ಕುಸಿದ ಕಡೆಯಲ್ಲೇ ತೆವಳಿಕೊಂಡು ಯಾರದೋ ಮನೆಯ ಜಗಲಿಯನ್ನು ಆಶ್ರಯಿಸಿ ಕುಳಿತುಬಿಟ್ಟ.


## ಕಂನಾಡಿಗಾ ನಾರಾಯಣ

ಶಿವಮೊಗ್ಗೆಯ ಸೆರಗಿನ ಗಾಡಿಕೊಪ್ಪದವರಾದ ಕಂನಾ ಎಂ.ಎ., ಎಂ.ಎಲ್. ಪದವೀಧರರು. 1986ರಲ್ಲಿ ಬರವಣಿಗೆ ಆರಂಭಿಸಿ 'ಮಂಡಲ', 'ಕ್ಷುದ್ರ ನಕ್ಷತ್ರದ ಕಪ್ಪು ರಂಧ್ರ', 'ಹಸಿರು ಕಣ್ಣಿನ ಹುಡುಗಿ', 'ನರವಿಂಧ್ಯ', 'ತಲ್ಲಣದ ಆ ಕ್ಷಣ..', 'ಜೀ ಗಾಂಧಿ..', 'ಇಹದ ಪರಿಮಳ' ಕಥಾ ಸಂಕಲನಗಳನ್ನು; 'ಕಾಂಡ', 'ಆಕಾಶ', 'ಭೂಮಿ', 'ದ್ವಾಪರ' ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಕಾದಂಬರಿ Kaanda, ಕಥಾ ಸಂಕಲನ Green Eyed Belle, Eclipsed Beauty, That Moment of Tumult, Ji Gandhi, The Fragrance of this world ಇಂಗ್ಲಿಷಿಗೆ ಅನುವಾದಗೊಂಡಿವೆ. ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.